# <u>ಅಲ್ಲಿ ನೋಡಲು ರಾಮ ಇಲ್ಲಿ ನೋಡಲು ರಾಮ</u>

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
2. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao
3. **Note:** The lyrics mentioned below are as per Ref. 1. The wordings in Ref. 2 are similar to Ref. 1 except few differences which are not considered here.
4. **Note:** Singer has followed these wordings.

ರಾಗ: ಖಮಾಚು (ನಾಟಿಕುರಂಜಿ) ತಾಳ ಆದಿ

ಅಲ್ಲಿ ನೋಡಲು ರಾಮ ಇಲ್ಲಿ ನೋಡಲು ರಾಮ
ಎಲ್ಲೆಲ್ಲಿ ನೋಡಿದರಲ್ಲಿ ಶ್ರೀರಾಮ || ಪ ||

ರಾವಣನ ಮೂಲಬಲ ಕಂಡು ಕಪಿಸೇನೆ
ಆವಾಗಲೇ ಬೆದರಿ ಓಡಿದವು
ಈ ವೇಳೆ ನರನಾಗಿ ಇರಬಾರದೆಂದೆಣಿಸಿ
ದೇವ ರಾಮಚಂದ್ರ ಜಗವೆಲ್ಲ ತಾನಾದ || ೧ ||

ಅವನಿಗೆ ಇವ ರಾಮ ಇವನಿಗೆ ಅವ ರಾಮ
ಅವನಿಯೊಳೀಪರಿ ರೂಪ ಉಂಟೆ
ಲವ ಮಾತ್ರದಿ ಅಸುರ ದುರುಳರೆಲ್ಲರು
ಅವರವರ್ ಹೊಡೆದಾಡಿ ಹತರಾಗಿ ಹೋದರು || ೨ ||

ಹನುಮದಾದಿ ಸಾಧು ಜನರು ಅಪ್ಪಿಕೊಂಡು
ಕುಣಿ ಕುಣಿದಾಡಿದರು ಹರುಷದಿಂದ
ಕ್ಷಣದಲ್ಲಿ ಪುರಂದರ ವಿಠಲ ರಾಯನು
ಕೊನೆಗೊಡೆಯನು ತಾನೊಬ್ಬನಾಗಿ ನಿಂತ || ೩ ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ವಾಲ್ಮೀಕಿ ರಾಮಾಯಣದಲ್ಲಿ ರಾವಣನು ಸೀತಾಪಹರಣಕ್ಕಾಗಿ ಮಾರೀಚನ ಸಹಾಯವನ್ನು ಬೇಡಿದಾಗ ಮಾರೀಚನು ಹಿಂದೆ ರಾಮನಿಂದ ತನಗೊದಗಿದ ಬವಣೆಯನ್ನು ವರ್ಣಿಸುತ್ತ ರಾಮನು ಬಿಟ್ಟ ಬಾಣದಿಂದ ತಾನು ತಲ್ಲಣಿಸಿ ಎಲ್ಲೆಲ್ಲಿಯೂ ರಾಮನನ್ನೇ ಕಂಡು ಭಯಪಟ್ಟೆನೆಂದು ಹೇಳುವ ಪ್ರಸಂಗ (ಅರಣ್ಯಕಾಂಡ, 38ನೆಯ ಸರ್ಗ)

ವೃಕ್ಷೇ ವಕ್ಷೇ ಚ ಪಶ್ಯಾಮಿ ಚೀರಕೃಷ್ಣಾಜಿನಾಂಬರಂ ।
ಗೃಹೀತಧನುಷಂ ರಾಮಂ ಪಾಶಹಸ್ತಮಿವಾಂತರಂ ।
ಅಪಿ ರಾಮಸಹಸ್ರಾಣಿ ಭೀತಃ ಪಶ್ಯಾಮಿ ರಾವಣ ॥
ರಾಮಭೂತಮಿದಂ ಸರ್ವಮರಣ್ಯಂ ಪ್ರತಿಭಾತಿ ಮೇ
ರಾಮಮೇವ ಹಿ ಪಶ್ಯಾಮಿ ರಹಿತೇ ರಾಕ್ಷಸಾಧಿಪ ॥

ಇದೇ ಪ್ರಸಂಗ ಯುದ್ಧಕಾಂಡದಲ್ಲಿಯೂ ಬರುತ್ತದೆ. ಇದನ್ನು ಕುರಿತು ಈ ಪದ ರಚಿತವಾಗಿದೆ. ಆದರೆ ವಾಲ್ಮೀಕಿ ರಾಮಾಯಣದಲ್ಲಿ ಇದು ಪ್ರಕ್ಷಿಪ್ತಭಾಗ. ರಾಮಾವತಾರದಲ್ಲಿ ಹರಿಯ ಮಹಿಮೆಯನ್ನು ಹೇಳುವುದು ಈ ಪದದ ಉದ್ದೇಶ. ಸರ್ವವ್ಯಾಪಕನಾಗಿ ದುಷ್ಟ ನಿಗ್ರಹ, ಶಿಷ್ಟ ಪರಿಪಾಲನೆಗಳನ್ನು ನಡೆಸುವವನು ಹರಿಯೇ.

**Classification:** Keerthane
**Ankita:** purandara vittala
**Location:** NA
**Category:** Rama Stuti, Hari Sarvottama
**Sub-Category:** Krishna, asura, deva, sadhu, ravana, rama, hanuma, bhaya, bhumi, santosha,
**Pravachana:** NA
**Explanation:** NA